ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

3

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 15/4/2021

## ರಾಜ್ಯದಲ್ಲಿ ಲಾಕ್‌ಡೌನ್ ಬಹುತೇಕ ಇಲ್ಲ, ಜನತಾ ಕರ್ಫ್ಯೂ ಚಿಂತನೆ

# ಕರೋನಾ ಯಮರ್ಜೆನ್ಸಿ

15-4-21

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು


ಸರ್ಕಾರದ ಕಟ್ಟೆಚ್ಚರ, ಜನಜಾಗೃತಿ ಕಾರ್ಯಕ್ರಮಗಳ ಹೊರತಾಗಿಯೂ ರಾಜ್ಯದಲ್ಲಿ ಕರೋನಾ 'ಎಮರ್ಜೆನ್ಸಿ' ಸ್ಥಿತಿ ಸೃಷ್ಟಿಯಾಗಿದೆ. ದಿನಕಳೆದಂತೆ ಸೋಂಕಿತರ ಸಂಖ್ಯೆ ಹಾಗೂ ಸಾವನ್ನಪ್ಪುವವರ ಪ್ರಮಾಣ ಹೆಚ್ಚುತ್ತಿರುವ ಪರಿಣಾಮ ರಾಜ್ಯದ ವಿವಿಧೆಡೆ ಆಸ್ಪತ್ರೆಗಳು ಭರ್ತಿಯಾಗಿದ್ದು, ತುರ್ತು ಚಿಕಿತ್ಸೆಗೂ ಬೆಡ್ ಸಿಗದ ಪರಿಸ್ಥಿತಿಯಿದೆ. ರಾಜಧಾನಿ ಬೆಂಗಳೂರಿನಲ್ಲಿ ಮೃತ ಸೋಂಕಿತರ ಅಂತ್ಯಸಂಸ್ಕಾರಕ್ಕೆ ಸರದಿಯಲ್ಲಿ ಕಾಯುವ ವಾತಾವರಣ ನಿರ್ಮಾಣವಾಗಿದೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಜೀವರಕ್ಷಣೆ ಜತೆಗೆ ಜೀವನ ಸಂರಕ್ಷಣೆಗೂ ಕ್ರಮಕೈಗೊಳ್ಳುವ ಹೊಣೆಹೊತ್ತ ಸರ್ಕಾರ ಕಠಿಣ ನಿರ್ಧಾರ ತೆಗೆದುಕೊಳ್ಳಬೇಕಾದ ಅನಿವಾರ್ಯತೆಗೆ ಸಿಲುಕಿದೆ. ಹೀಗಾಗಿ ಏಪ್ರಿಲ್ 18ರಂದು ಸಂಜೆ ಸರ್ವಪಕ್ಷ ಸಭೆ ಕರೆದಿರುವ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮುಂದೇನು ಮಾಡಬೇಕೆಂದು ರಾಜಕೀಯ ನಾಯಕರ ಅಭಿಪ್ರಾಯ ಪಡೆಯಲಿದ್ದಾರೆ. ಆದಾದ ಬಳಿಕ ಸರ್ಕಾರದ ಹೊಸ ಮಾರ್ಗಸೂಚಿ ಪ್ರಕಟವಾಗುವ ಸಾಧ್ಯತೆ ಇದೆ.

» **18ರ ಸರ್ವಪಕ್ಷ ಸಭೆಯಲ್ಲಿ ಕಠಿಣ ನಿರ್ಧಾರ**

**ಸ್ಪಷ್ಟತೆ ಇಲ್ಲ:** ಲಾಕ್‌ಡೌನ್ ಬಗ್ಗೆ ಪರ-ವಿರೋಧದ ಅಭಿಪ್ರಾಯಗಳು ಚರ್ಚೆಯಲ್ಲಿದೆ. ಮುಖ್ಯಮಂತ್ರಿ ಆದಿಯಾಗಿ ಹಲವು ಸಚಿವರು, ಪ್ರತಿಪಕ್ಷದ ಮುಖಂಡರು ಲಾಕ್‌ಡೌನ್ ಬಗ್ಗೆ ಒಲವು ಹೊಂದಿಲ್ಲ ಎಂಬುದು ಬುಧವಾರ ಸರ್ಕಾರದ ಹೇಳಿಕೆಗಳಿಂದ ಸ್ಪಷ್ಟವಾಗಿದೆ. ಈ ನಡುವೆಯೂ ಸೋಂಕು ಹರಡುವಿಕೆ ತಗ್ಗಿಸಲು ಬೇರೆ ಮಾರ್ಗ ಯಾವುದಿದೆ ಎಂಬ ಬಗ್ಗೆಯೂ ಸ್ಪಷ್ಟತೆ ಮೂಡಿಲ್ಲ. ಬೆಂಗಳೂರು ಮತ್ತು ಬೆಳಗಾವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ರಾಜ್ಯದಲ್ಲಿ ಕರೋನಾ ನಿಯಂತ್ರಣಕ್ಕೆ ಲಾಕ್‌ಡೌನ್ ಜಾರಿ ಮಾಡದೆ ಮತ್ತಷ್ಟು ಬಿಗಿ ಕ್ರಮ ಕೈಗೊಳ್ಳಲಾಗುವುದು. ಮಹಾರಾಷ್ಟ್ರದಲ್ಲಿ ಕೈಗೊಂಡಂತೆ ಜನತಾ ಕರ್ಫ್ಯೂ ಜಾರಿ ಮಾಡಲು ಸರ್ವಪಕ್ಷ ಸಭೆಯಲ್ಲಿ ಚರ್ಚೆ ಮಾಡಲಾಗುತ್ತದೆ ಎಂದು ಹೇಳಿದರು. ರಾಜ್ಯದ ಎಂಟು ಜಿಲ್ಲೆಗಳಲ್ಲಿ ನೈಟ್ ಕರ್ಫ್ಯೂ ಜಾರಿಗೊಳಿಸಲಾಗಿದೆ. ಅಗತ್ಯಬಿದ್ದರೆ ಒಂದೆರಡು ಜಿಲ್ಲೆಗಳಿಗೆ ವಿಸ್ತರಿಸುವ ಕುರಿತು ಚಿಂತನೆ ನಡೆಸಲಾಗುವುದು. ಮಹಾರಾಷ್ಟ್ರದಲ್ಲಿ ತೆಗೆದುಕೊಂಡಿರುವ ಕ್ರಮಗಳ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಸಲಾಗುತ್ತದೆ.

ಪುಟ 3

ವಿಜಯವಾಣಿ ಚಿತ್ರ




ಬೆಂಗಳೂರಿನಲ್ಲಿ ಕರೋನಾ ಸಾವಿನ ಸಂಖ್ಯೆ ಹೆಚ್ಚಳದಿಂದಾಗಿ ವಿದ್ಯುತ್ ಚಿತಾಗಾರಗಳಲ್ಲಿ ಅಂತ್ಯಸಂಸ್ಕಾರಕ್ಕೂ ಆಂಬುಲೆನ್ಸ್‌ಗಳು ಗಂಟೆಗಟ್ಟಲೆ ಸಾಲುಗಟ್ಟಿ ನಿಲ್ಲುವ ಸ್ಥಿತಿ ಇದೆ.ಬುಧವಾರ ಮೇಡಿ ಅಗ್ರಹಾರದ ಚಿತಾಗಾರದ ಎದುರು ಕಂಡ ದೃಶ್ಯ.

## ಸಂಭಾವ್ಯ ಕ್ರಮ

- ಸಾರ್ವಜನಿಕ ಕಾರ್ಯಕ್ರಮಕ್ಕೆ ಸಂಪೂರ್ಣ ಬ್ರೇಕ್
- ಮಾರುಕಟ್ಟೆಗಳಲ್ಲಿ ವ್ಯಕ್ತಿಗತ ಅಂತರ ಗಮನಿಸಲು ಪೊಲೀಸ್ ಬಳಕೆ
- ಸಾರ್ವಜನಿಕ ಸಾರಿಗೆಗಳಲ್ಲಿ ಶೇ.50ರ ಮಿತಿ, ನಗರ ಪ್ರದೇಶಗಳಲ್ಲಿ ನೈಟ್ ಕರ್ಫ್ಯೂ ಜಾರಿ
- ಪಬ್, ಬಾರ್, ಹೋಟೆಲ್‌ಗಳಲ್ಲಿ ಪ್ರವೇಶ ಮಿತಿ, ವರ್ಕ್‌ಫ್ರಂ ಹೋಂಗೆ ಒತ್ತು ನೀಡಲು ಸೂಚನೆ
- ಅಂತರರಾಜ್ಯ ಓಡಾಟಕ್ಕೆ ನಿಯಂತ್ರಣ, ಇ- ಪಾಸ್ ವ್ಯವಸ್ಥೆ



ಲಾಕ್‌ಡೌನ್ ಬದಲು ಮತ್ತಷ್ಟು ಕ್ರಮ ಕೈಗೊಳ್ಳಲಾಗುವುದು. ಮಹಾರಾಷ್ಟ್ರದಂತೆ ಜನತಾ ಕರ್ಫ್ಯೂ ಜಾರಿಗೆ ಸರ್ವಪಕ್ಷ ಸಭೆಯಲ್ಲಿ ಚರ್ಚೆ ಮಾಡಲಾಗುತ್ತದೆ

| ಬಿ.ಎಸ್.ಯಡಿಯೂರಪ್ಪ ಸಿಎಂ



ರಾಜ್ಯದಲ್ಲಿ ಲಾಕ್‌ಡೌನ್ ಮಾಡಲ್ಲ. ಜನರೇ ಸ್ವಯಂ ಕರ್ಫ್ಯೂ ವಿಧಿಸಿಕೊಳ್ಳಲಿ, ಅನಗತ್ಯ ಓಡಾಟ ನಿಲ್ಲಿಸಲಿ.

| ಡಾ.ಕೆ.ಸುಧಾಕರ್ ಆರೋಗ್ಯ ಸಚಿವ

## ಎಲ್ಲೆಲ್ಲಿಗೆ ನೈಟ್ ಕರ್ಫ್ಯೂ ವಿಸ್ತರಣೆ?

ಬೆಂಗಳೂರು, ಮೈಸೂರು, ಮಂಗಳೂರು, ಕಲಬುರಗಿ, ಬೀದರ್, ತುಮಕೂರು, ಉಡುಪಿ ಮತ್ತು ಮಣಿಪಾಲ್‌ನಲ್ಲಿ ನೈಟ್ ಕರ್ಫ್ಯೂ ಜಾರಿಯಲ್ಲಿದೆ. ಇದರ ಹೊರತು ಬಳ್ಳಾರಿ, ಮಂಗಳೂರು, ಕೋಲಾರ, ಧಾರವಾಡ, ವಿಜಯಪುರ,ಬೆಳಗಾವಿ, ಹಾಸನಕ್ಕೂ ಮೊದಲ ಹಂತದಲ್ಲಿ ನೈಟ್ ಕರ್ಫ್ಯೂ ವಿಸ್ತರಣೆಯಾಗುವ ಸಾಧ್ಯತೆ ಹೆಚ್ಚಿದೆ.

## ಸಿಬಿಎಸ್‌ಇ 10ನೇ ಕ್ಲಾಸ್ ಎಕ್ಸಾಂ ರದ್ದು

ದೇಶಾದ್ಯಂತ ಕರೋನಾ ಸೋಂಕು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಿಬಿಎಸ್‌ಇ 10ನೇ ತರಗತಿ ಬೋರ್ಡ್ ಪರೀಕ್ಷೆ ರದ್ದು ಪಡಿಸಲು ಹಾಗೂ ಮೇ 4ರಿಂದ ನಡೆಯಬೇಕಿದ್ದ 12ನೇ ತರಗತಿ ಪರೀಕ್ಷೆ ಮುಂದೂಡಲು ಬುಧವಾರ ನಡೆದ ಉನ್ನತ ಮಟ್ಟದ ಸಭೆಯಲ್ಲಿ ನಿರ್ಧರಿಸಲಾಗಿದೆ.

### ರಾಜ್ಯದಲ್ಲಿ ತೀರ್ಮಾನ ಆಗಿಲ್ಲ

ರಾಜ್ಯದಲ್ಲೂ ಎಸ್ಸೆಸ್ಸೆಲ್ಸಿ ಪರೀಕ್ಷೆ ರದ್ದುಪಡಿಸುವ ಅಥವಾ 12ನೇ ತರಗತಿ ಪರೀಕ್ಷೆ ಮುಂದೂಡುವ ಬಗ್ಗೆ ತೀರ್ಮಾನ ಕೈಗೊಂಡಿಲ್ಲ. ಪರೀಕ್ಷೆಗೆ ಕಾಲಾವಕಾಶ ಇರುವುದರಿಂದ ಮುಂದಿನ ದಿನಗಳಲ್ಲಿ ಪರಿಸ್ಥಿತಿ ಅವಲೋಕಿಸಿ ತೀರ್ಮಾನಿಸಲಾಗುವುದು.

| ಎಸ್.ಸುರೇಶ್ ಕುಮಾರ್ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ

**ಒಂದೇ ದಿನ 1.84 ಲಕ್ಷ ಕೇಸ್** 10

**ರಾಜ್ಯದಲ್ಲಿ 11,265 ಪ್ರಕರಣ** 9

4

## ಒಂದಿಷ್ಟು ಕಠಿಣ ನಿಯಮಗಳು ನಿಶ್ಚಿತ ಲಾಕ್‌ಡೌನ್‌ಗೆ ಸರ್ಕಾರ ಹಿಂದೇಟು

# ರಾಜ್ಯದಲ್ಲಿ ಕರೊನಾ ಯಮುರ್ಜೆನ್ಸಿ

ಮೊದಲನೇ ಪುಟದಿಂದ... ವಿ-ವಾ. 15-4-21

ಮಂಗಳವಾರ ಅಧಿಕಾರಿಗಳ ಸಭೆ ನಡೆಸಿ ಚರ್ಚೆ ಮಾಡಲಾಗಿದೆ. ಲಾಕ್‌ಡೌನ್ ಬಿಟ್ಟು ಹಿಂದೆ ಕೈಗೊಂಡ ಉಳಿದೆಲ್ಲ ಕ್ರಮ ಜಾರಿ ಮಾಡಬೇಕು ಎನ್ನುವುದು ನಮ್ಮ ಮನಸ್ಸಿನಲ್ಲಿದೆ ಎಂದು ಸಿಎಂ ಹೇಳಿದರು. ರಾಜ್ಯದಲ್ಲಿ ವೀಕೆಂಡ್ ಲಾಕ್‌ಡೌನ್ ಜಾರಿ ಕುರಿತಂತೆ ಯಾವುದೇ ಚರ್ಚೆ ನಡೆದಿಲ್ಲ. ಅಂತಹ ಪ್ರಸ್ತಾಪವೂ ಸದ್ಯ ಸರ್ಕಾರದ ಮುಂದಿಲ್ಲ. ಲಾಕ್‌ಡೌನ್ ಹೊರತುಪಡಿಸಿ ಇತರ ಎಲ್ಲ ಕಟ್ಟುನಿಟ್ಟಿನ ಕ್ರಮಗಳ ಕುರಿತು ಏನೆಲ್ಲ ಮಾಡಬೇಕು ಎನ್ನುವ ಬಗ್ಗೆ ಸರ್ವ ಪಕ್ಷ ನಾಯಕರ ಸಭೆ ನಡೆಸಿ ಅವರ ಅಭಿಪ್ರಾಯ ಪಡೆದು ನಂತರವೇ ನಿರ್ಧರಿಸಲಾಗುತ್ತದೆ ಎಂದು ಬಿಎಸ್‌ವೈ ಸ್ಪಷ್ಟಪಡಿಸಿದರು. ಇದೇ ವೇಳೆ, ಯಾವುದೇ ಕಾರಣಕ್ಕೂ ಲಾಕ್‌ಡೌನ್ ಬೇಡ ಎಂಬ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿ ಕೇಳಿಬಂದಿದೆ.

**ಸರ್ಕಾರದ ಮುಂದೇನಿದೆ?:** ●ಆರ್ಥಿಕ ಪರಿಸ್ಥಿತಿ ಕಾರಣದಿಂದ ಲಾಕ್‌ಡೌನ್ ಮಾಡದೆಯೇ ಪರಿಸ್ಥಿತಿ ನಿಯಂತ್ರಣ ●ಮಹಾರಾಷ್ಟ್ರದಂತೆ ಜನತಾ ಕರ್ಫ್ಯೂ ಘೋಷಿಸಿ ಕೆಲವು ಗಂಟೆ ಮಾರುಕಟ್ಟೆ, ಸಾರ್ವಜನಿಕರ ಓಡಾಟಕ್ಕೆ ಅವಕಾಶ ನೀಡುವುದು, ಉಳಿದ ಅವಧಿಯಲ್ಲಿ ಜನರೇ ಸ್ವಯಂಪ್ರೇರಿತರಾಗಿ ಮನೆಯಲ್ಲಿರುವಂತೆ ಮಾಡುವುದು ●ಜನತಾ ಕರ್ಫ್ಯೂಗೆ ಸಹಮತ ಸಿಗದಿದ್ದಲ್ಲಿ ಒಂದಷ್ಟು ಕಠಿಣ ನಿಯಮ ಜಾರಿ ನಿಶ್ಚಿತ.

**ಮತ್ತೆ ಲಾಕ್‌ಡೌನ್ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲ. ಸಮಾಜದಲ್ಲಿ ಯಾರಿಗೂ ಲಾಕ್‌ಡೌನ್ ತಡೆದುಕೊಳ್ಳುವ ಶಕ್ತಿ ಇಲ್ಲ. ಈಗಿನ ಸಂದರ್ಭದಲ್ಲಿ ಅದು ಹೊಂದುವುದೂ ಇಲ್ಲ.**
| **ಡಾ.ಸಿ.ಎನ್.ಅಶ್ವತ್ಥನಾರಾಯಣ** ಉಪ ಮುಖ್ಯಮಂತ್ರಿ

### 45ರ ಕೆಳಗಿನವರಿಗೂ ಲಸಿಕೆ?

**45** ವರ್ಷದ ಒಳಗಿನವರಿಗೂ ಕೋವಿಡ್ ಲಸಿಕೆ ನೀಡುವ ಬಗ್ಗೆ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಡಿ.ವಿ ಸದಾನಂದ ಗೌಡ ಸುಳಿವು ನೀಡಿದ್ದಾರೆ. ಕೇಂದ್ರ ಸರ್ಕಾರವು ಸದ್ಯ 45 ವರ್ಷ ಮೇಲ್ಪಟ್ಟವರಿಗಷ್ಟೇ ಉಚಿತ ಲಸಿಕೆ ಒದಗಿಸುತ್ತದೆ. ಅದಕ್ಕಿಂತ ಕೆಳಗಿನ ವಯಸ್ಸಿವರಿಗೆ ಲಸಿಕೆ ವಿತರಿಸಲು ತಯಾರಿ ಮಾಡಿಕೊಳ್ಳಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

### ವಾರಾಂತ್ಯ ಲಾಕ್ ಆದರೆ?

» ಜನರ ಪ್ರವಾಸ ನಿಯಂತ್ರಿಸಬಹುದು

» ಪಾರ್ಟಿಗಳಿಗೂ ತಡೆಬೀಳಲಿದೆ

» ಜನರ ಓಡಾಟ ನಿಯಂತ್ರಣವಾಗಿ ಸೋಂಕು ಹರಡುವಿಕೆ ತಗ್ಗಬಹುದು

### ಸ್ವಯಂ ನಿಯಂತ್ರಣ ವಿಜಯವಾಣಿ ಕಾಳಜಿ



●ಸರ್ಕಾರ ಸೋಂಕು ನಿಯಂತ್ರಿಸಲಿಲ್ಲ, ಇದು ಮಾಡಬೇಕಿತ್ತು, ಅದು ಮಾಡಬೇಕಿತ್ತು ಎಂದು ದೂರುವ ಕಾಲ ಇದಲ್ಲ. ಸ್ವಯಂ ಎಚ್ಚರಿಕೆಯೇ ನಮ್ಮ ಮುಂದಿರುವ ದಾರಿ

●ಮನೆಯಿಂದ ಹೊರಗಿರುವಾಗ ಮಾಸ್ಕ್ ಧರಿಸುವುದು, ವೈಯಕ್ತಿಕ ಅಂತರಕ್ಕೆ ಮಹತ್ವ ಕೊಡುವುದು, ಸಾರ್ವಜನಿಕ ಸಭೆ, ಸಮಾರಂಭಗಳಿಂದ ಸಾಧ್ಯವಾದಷ್ಟು ದೂರ ಉಳಿದರೆ ಉತ್ತಮ

●ಜನಜಂಗುಳಿ ಸೇರುವ ಪ್ರದೇಶಕ್ಕೆ ಹೋಗದೇ ಸ್ವಯಂನಿಯಂತ್ರಣ ಹಾಕಿಕೊಳ್ಳುವುದು, ಪದೇಪದೆ ಮಾರುಕಟ್ಟೆಗಳಿಗೆ ಹೋಗದಿರುವುದು, ಹೊರಗಿ ನಿಂದ ಮನೆ ಪ್ರವೇಶಿಸಿದಾಗ ಸ್ವಚ್ಛತೆಗೆ ಆದ್ಯತೆ

### ಸಿಎಂ ಕಂಟ್ರೋಲ್

**1** ಹಿರಿಯ ಅಧಿಕಾರಿಗಳ ಸಭೆ, ಖಾಸಗಿ ಆಸ್ಪತ್ರೆಗಳ ಬೆಡ್ ಸ್ಥಿತಿಗತಿ ಕುರಿತು ಕ್ಷಣ ಕ್ಷಣದ ಮಾಹಿತಿ ಪಡೆಯಲು ಸೂಚನೆ

**2** ಲಸಿಕೆ ಕೊರತೆ ಆಗದಂತೆ ಕೇಂದ್ರ ಆರೋಗ್ಯ ಸಚಿವರ ಜತೆ ನಿರಂತರ ಸಂಪರ್ಕ ಮಾಡಿ ಅವಶ್ಯಕತೆಗೆ ಅನುಗುಣವಾಗಿ ಲಸಿಕೆ ಪಡೆಯಲು ಅಧಿಕಾರಿಗಳಿಗೆ ನಿರ್ದೇಶನ

**3** ನೈಟ್ ಕರ್ಫ್ಯೂವನ್ನು ಇನ್ನಷ್ಟು ಬಿಗಿಗೊಳಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ತಾಕೀತು. ಮಾಸ್ಕ್ ಧರಿಸದವರು, ನಿಯಮ ಉಲ್ಲಂಘಿಸುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ

**4** ಮೈಕ್ರೋ ಕಂಟೇನ್‌ಮೆಂಟ್ ಜೋನ್‌ಗಳಲ್ಲಿ ಹೆಚ್ಚಿನ ಟೆಸ್ಟ್ ಮಾಡುವುದು, ಕಾಂಟ್ಯಾಕ್ಟ್ ಟ್ರೇಸಿಂಗ್‌ಗೆ ಹೆಚ್ಚಿನ ಒತ್ತು ನೀಡಲು ಸೂಚನೆ.

**5** ಮನೆಯಲ್ಲಿ ಐಸೋಲೇಷನ್ ಇರುವವರ ಬಗ್ಗೆ ನಿರಂತರ ಮಾಹಿತಿ ಪಡೆಯಲು ಈ ಹಿಂದೆ ಅನುಸರಿಸುತ್ತಿದ್ದ ಕ್ರಮ ಅನುಸರಿಸುವುದು.

**6** ಲಭ್ಯತೆಗೆ ಅನುಗುಣವಾಗಿ ಕರೊನಾ ಸೋಂಕಿತರಿಗೆ ನೀಡುವ ರೆಮಿಡಿಸಿವರ್ ಔಷಧವನ್ನು ಖಾಸಗಿ ಆಸ್ಪತ್ರೆಗಳಿಗೆ ಒದಗಿಸುವುದು.

... ಮುಖ್ಯ. ಕಾರ್ಯದರ್ಶಿಯನು ...